Be Internet Awesome

Being Internet Awesome ಎಂದರೆ ಚಾತುರ್ಯ, ಎಚ್ಚರಿಕೆ, ಸದೃಢತೆ, ಕರುಣೆ ಮತ್ತು ಧೈರ್ಯದ ಗುಣಗಳನ್ನು ಹೊಂದಿರುವುದು. ಈ ಗುಣಗಳನ್ನು ಪ್ರದರ್ಶಿಸಲು, ನಮ್ಮ ಕುಟುಂಬದ ಎಲ್ಲಾ ಸದಸ್ಯರು ಈ ಕೆಳಗಿನ ಬಾಧ್ಯತೆಗಳಿಗೆ ಬದ್ಧರಾಗಿರುತ್ತೇವೆ ಎಂದು ಪ್ರಮಾಣ ಮಾಡುತ್ತೇವೆ:

## ಹಂಚಿಕೊಳ್ಳುವಾಗ ಎಚ್ಚರವಹಿಸಿ

ನಾವು ಏನನ್ನು ಹಂಚಿಕೊಳ್ಳುತ್ತಿದ್ದೇವೆ, ಯಾರೊಂದಿಗೆ ಹಂಚಿಕೊಳ್ಳುತ್ತಿದ್ದೇವೆ - ಅದು ನಮ್ಮ ಮೇಲೆ ಹಾಗೂ ಇತರರ ಮೇಲೆ ಹೇಗೆ ಪರಿಣಾಮ ಬೀರಬಹುದು - ಎಂಬ ಬಗ್ಗೆ ಎಚ್ಚರಿಕೆಯಿಂದ ಯೋಚಿಸುತ್ತೇವೆ ಮತ್ತು ಹೆಚ್ಚುವರಿ ಸೂಕ್ಷ್ಮ ಮಾಹಿತಿಯನ್ನು, ಅಂದರೆ ಮನೆಯ ವಿಳಾಸ, ಪ್ರಸ್ತುತ ಸ್ಥಳ, ಇತರ ಜನರ ವ್ಯಾಪಾರದಂತಹ ಸಂಗತಿಗಳನ್ನು ನಮ್ಮಲ್ಲಿಯೇ ಇರಿಸಿಕೊಳ್ಳುತ್ತೇವೆ.

## ನಕಲಿ ವಿಷಯಗಳಿಗೆ ಮರುಳಾಗಿ ಮೋಸಹೋಗಬೇಡಿ

ಫಿಶಿಂಗ್ ಹಾಗೂ ಸ್ಕ್ಯಾಮ್‌ಗಳ ಕುರಿತು ನಾವು ಎಚ್ಚರಿಕೆಯಿಂದ ಇರುತ್ತೇವೆ ಮತ್ತು ಪ್ರಶ್ನಾರ್ಹ ಚಟುವಟಿಕೆಯ ಕುರಿತು ನಾವು ಪರಸ್ಪರರಿಗೆ ಪ್ರತಿ ಬಾರಿಯೂ ಮಾಹಿತಿ ನೀಡುತ್ತೇವೆ.

## ನಿಮ್ಮ ರಹಸ್ಯಗಳನ್ನು ಸುರಕ್ಷಿತವಾಗಿರಿಸಿ

ಕ್ಯಾರೆಕ್ಟರ್‌ಗಳು, ಸಂಖ್ಯೆಗಳು ಮತ್ತು ಸಂಕೇತಗಳನ್ನು ಬಳಸಿಕೊಂಡು ಸದೃಢವಾದ ಮತ್ತು ಅನನ್ಯವಾದ ಪಾಸ್‌ವರ್ಡ್‌ಗಳನ್ನು ರಚಿಸುವ ಮೂಲಕ ನಾವು, ಮುಖ್ಯ ಮಾಹಿತಿಯನ್ನು ಸುರಕ್ಷಿತವಾಗಿರಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತೇವೆ.

## ದಯೆಯೇ ಧರ್ಮದ ಮೂಲ

ನಾವು ಸಕಾರಾತ್ಮಕ ಭಾವನೆಗಳು ಹಾಗೂ ಗೌರವವನ್ನು ಪಸರಿಸುತ್ತೇವೆ ಮತ್ತು ಆನ್‌ಲೈನ್‌ನಲ್ಲಿ ಹಾನಿಕಾರಕ ವರ್ತನೆಯನ್ನು ನಾವು ನಿರ್ಬಂಧಿಸುತ್ತೇವೆ ಮತ್ತು ಆ ಕುರಿತು ವರದಿ ಮಾಡುತ್ತೇವೆ.ಆನ್‌ಲೈನ್‌ನಲ್ಲಿ ಇತರರಿಗೆ ಹಾನಿಯಾಗುತ್ತಿರುವುದನ್ನು ಕಂಡುಬಂದರೆ, ನಾವು ಸಮರ್ಥಕರಾಗುತ್ತೇವೆಯೇ ಹೊರತು, ಕೇವಲ ನೋಡುಗರಾಗಿ ಇರುವುದಿಲ್ಲ.

## ಸಂದೇಹ ಬಂದಾಗ, ಮಾತನಾಡಿ ಬಗೆಹರಿಸಿಕೊಳ್ಳಿ

ನಾವು ಆನ್‌ಲೈನ್‌ನಲ್ಲಿ ಹಾನಿಕಾರಕವಾದ ಅಥವಾ ಅನುಚಿತ ವರ್ತನೆಯನ್ನು ಕಂಡಾಗ, ನಮಗಾಗಿ ಮತ್ತು ಇತರರಿಗಾಗಿ ಧ್ವನಿ ಎತ್ತುತ್ತೇವೆ.ನಮಗೆ ಅಹಿತ ಉಂಟುಮಾಡುವ ಸನ್ನಿವೇಶಗಳ ಕುರಿತು ನಾವು ಪರಸ್ಪರರೊಂದಿಗೆ ಒಂದು ಕುಟುಂಬವಾಗಿ ಚರ್ಚಿಸುತ್ತೇವೆ.

ಏಕೆಂದರೆ, ಆನ್‌ಲೈನ್ ಪ್ರಪಂಚವನ್ನು ಸುರಕ್ಷಿತವಾಗಿ ಮತ್ತು ಆತ್ಮವಿಶ್ವಾಸದಿಂದ ಅನ್ವೇಷಿಸಲು ಬೇಕಾಗಿರುವ ಗುಣ ಇದೇ ಆಗಿದೆ.

ಸಹಿ,